ಕುಳಿತುಕೊಂಡು ಅವನು ನುಡಿಸಿ ಕೇಳಿಸಿದ ಹಾಡುಗಳು ನೆನಪಿಗೆ ಬಂದವು.

'ಅಯ್ಯಪ್ಪನಿಗೆ ಸಂಗೀತ ಒಲಿದಿದ್ದು ಹೇಗೆ ಅಂತ ಹೇಳಲಾ ನಿಮಗೆ?' ಅಂದೆ ಆಕೆಗೆ.

ನಿಜ ಸಂಗತಿಯೇನೆಂದರೆ ಆ ವಿಷಯವನ್ನು ಆಕೆಗೆ ಹೇಳುವುದು ನನಗೆ ಇಷ್ಟವೇ ಇಲ್ಲ. ಆದರೆ ಒಳಗಿಂದ ಗುದ್ದಿಕೊಂಡು ಬರ್ತಿದೆ.

'ಪ್ಲೀಜ್ ಹೇಳ್ರೀ... ನನಗೆ ಏನಾದರೂ ಕೇಳಿಸ್ಕೋಬೇಕು ಅನಿಸ್ತಿದೆ.'

'ಸರಿ ಕೇಳಿ. ಅಯ್ಯಪ್ಪನದು ದೊಡ್ಡ ಸಂಗೀತ ಕುಟುಂಬವೇನಲ್ಲ. ಅವರ ಅಮ್ಮ ಯಾವಾಗಾದರೂ ಹಾಡುಗಳನ್ನು ಹಾಡುತ್ತಿದ್ದಳೇನೋ ನನಗೆ ತಿಳಿಯದು. ವಾದ್ಯಸಂಗೀತ ಮಾತ್ರ ಅವರಿಗೆ ಅಸಲಿಗೆ ತಿಳಿಯದು. ಆದರೆ ಅದು ಇವನಿಗೆ ಬಂದು ಬಿಟ್ಟಿತು. ಹೇಗೇಂತ ಗೊತ್ತಾ? ನಮ್ಮೂರಲ್ಲಿ ಅವರು ಇರೋ ಏರಿಯಾದಲ್ಲಿ ಒಂದು ಚರ್ಚ್ ಇತ್ತು. ಪ್ರತಿ ಆದಿತ್ಯವಾರ ಅಲ್ಲಿ ಕ್ರಿಶ್ಚಿಯನ್ಸ್ ಮೈಕು ಆರ್ಕೆಸ್ಟ್ರಾ ಎಲ್ಲ ಇಟ್ಟು ಹಾಡು ಹಾಡುತ್ತಾ ಪ್ರೇಯರ್ ಮಾಡ್ತಿದ್ದರು. ಅವರ ಹತ್ತಿರ ತುಂಬಾ ಇನ್‌ಸ್ಟ್ರುಮೆಂಟ್ಸ್ ಇರೋವು. ತಬಲಾ, ಕಾಂಗೋ, ಹಾಲೋ, ಗಿಟಾರ್, ಫ್ಲೂಟ್, ಡ್ರಮ್ಸ್... ಅವುಗಳನ್ನು ನೋಡಿದಂತೆಲ್ಲ ಇವನಿಗೆ ಮೈತುಂಬಿಕೊಳ್ಳೋದು. ಅವುಗಳನ್ನು ನೋಡೋಕೆಂತಲೇ ಪ್ರತಿ ರವಿವಾರ ಮಿಸ್ ಮಾಡದೆ ಚರ್ಚಿಗೆ ಹೋಗೋನು.

ಒಂದು ರವಿವಾರ ಇನ್ನು ತಡೆದುಕೊಳ್ಳಲಾಗದೆ ಪ್ರೇಯರ್ ಮುಗಿದು ಎಲ್ಲರೂ ಹೋಗುತ್ತಿರುವಾಗ ಫ್ಲೂಟ್ ಬಾರಿಸೋವಾತನ ಹತ್ತಿರ ಹೋಗಿ, 'ಅಣ್ಣಾ ನಂಗೂ ಕಲಿಸ್ತೀಯಾ ನಿನ್ ಕೈ ಮುಗಿತೀನಿ' ಅಂದನಂತೆ.

ಆಗ ಆ ಫ್ಲೂಟಿಸ್ಟ್, 'ತಮ್ಮಾ ಇದು ಕಲಿಸೋದಲ್ಲಪ್ಪ. ಮೊದಲು ನೀನೇ ಸ್ವಲ್ಪ ಕಲಿತುಕೋಬೇಕು. ಆನಂತರ ನಾನು ಸ್ವಲ್ಪ ಕಲಿಸ್ತೀನಿ. ಆಮೇಲೆ ಪ್ರಭುವಿನ ದಯೆ' ಅಂದನಂತೆ.

ಆತ ನಿಜ ಹೇಳಿದ್ದು. ಆದರೆ ಇವನು ತಮಾಷೆ ಮಾಡಿದನೇನೋ ಎಂದುಕೊಂಡು ಮನೆಗೆ ಬಂದು ಅವರ ಅಪ್ಪನ ಹತ್ತಿರ ಅತ್ತು ನೆಲ್ಲೂರಿನಿಂದ ಫ್ಲೂಟ್ ತರಿಸಿಕೊಂಡ.

ತುಂಬಾ ಮಾಮೂಲಾದ ಫ್ಲೂಟ್ ಅದು. ಆದರೆ ಅದರ ಕಣ್ಣುಗಳು, ನುಣುಪಾದ ಅದರ ಹೊರಮೈ, ಮೃದುವಾದ ಅದರ ಸ್ಪರ್ಶ... ತುಟಿಗಳ ಹತ್ತಿರ ತರುತ್ತಿದ್ದಂತೆಯೇ ಅದು ಮುದ್ದಾಡಿದ ರೀತಿ ಅವನೊಳಗೆ ಆಟೋಮ್ಯಾಟಿಕ್ ಆಗಿ ಸಂಗೀತವನ್ನು ತುಂಬಿಬಿಟ್ಟವು. ಮೊದಲ ಸಲಕ್ಕೇ ದಮ್ಮು ನಿಂತಿತು. ಹೇಗೆ ಬಂತೋ ಏನೋ ಅವನಿಗೆ ಫ್ಲೂಟ್ ಬಂತು. ಆಮೇಲವನು ಗಿಟಾರ್ ಕಲಿತುಕೊಂಡ. ಆಮೇಲೆ ಕೀಬೋರ್ಡ್. ಎಲ್ಲ ಅವನಷ್ಟಕ್ಕೇ. ಯಾರೂ ಗುರುಗಳಿಲ್ಲ. ವಿಚಿತ್ರ ಸಂಗತಿ ಏನೆಂದರೆ ಇವತ್ತಿಗೂ ಅವನಿಗೆ ವೆಸ್ಟ್ರನ್ ನೊಟೇಷನ್ ಬರಲ್ಲ. ಸ... ಪ... ಸ ಅಂತ ತೆಲುಗಿನಲ್ಲೇ ಬರೆದುಕೊಂಡು ನುಡಿಸ್ತಾನೆ. ನೋಡೋಕೆ ಅಮೆಜಿಂಗ್ ಆಗಿರುತ್ತೆ...'

ಆಕೆ ಎಲ್ಲ ಕೇಳಿಸಿಕೊಂಡಳು. ಏನೂ ಮಾತಾಡಲಿಲ್ಲ.

ಸ್ವಲ್ಪ ಹೊತ್ತಿನ ನಂತರ, 'ಇದೆಲ್ಲ ನನಗೇಕೆ ಹೇಳಿದ್ದು?' ಅಂದಳಾಕೆ ಅನುಮಾನದಿಂದ.

ನಾನು ಮಾತಾಡಲಿಲ್ಲ.

'ಪರವಾಗಿಲ್ಲ ಹೇಳಿ. ಯಾಕೆ?'

'ಯಾಕೆ ಅಂದರೆ ಅವನೊಳಗೆ ಸಂಗೀತ ಇತ್ತು. ಇತ್ತು ಆದ್ದರಿಂದ ಅದು ಹೊರಬಂತು. ಅದನ್ನು ಯಾರೂ ತಡೆಯಲಾರರು. ಒಂದು ವೇಳೆ ಸಂಗೀತವೇ ಇಲ್ಲದಿದ್ರೆ, ಸಾಹಿತ್ಯವೇ ಇಲ್ಲದಿದ್ರೆ, ನೃತ್ಯವೇ ಇಲ್ಲದಿದ್ರೆ ಯಾರೂ ಹೊರಗೆ ತರಲಾರರು. ಆ ವಿಷಯವೇ ನಿಮಗೊ ಗೊತ್ತಿಲ್ಲ. ಅಥವಾ ಗೊತ್ತು ಮಾಡಿಕೊಳ್ತಿಲ್ಲ. ಅದಕ್ಕಾಗೇ ಡೆಸ್ಪರೇಟ್ ಆಗಿ ಈಗಿಂದೀಗಲೇ ನಿಮ್ಮ ಮಗನನ್ನು ಏನೋ